ಶೇಷಾದ್ರಿಪುರಂ ಶಿವಮೊಗ್ಗ
ಶ್ರೀ ಪಾಲಾಕ್ಷಪ್ಪ, 4ನೇ
ಅಡ್ಡ ರಸ್ತೆ, ದುರ್ಗಿಗುಡಿ,
ಶಿವಮೊಗ್ಗ.
ಶ್ರೀ ಕೆ. ಭೀಮಣ್ಣ, ಬಿನ್
ಕೆಂಚಪ್ಪ, ಕುಂಬಾರಗೇರಿ,
(ಸೀಗೆಹಟ್ಟಿ), ಶಿವಮೊಗ್ಗ.
ಶ್ರೀ ಕೆಂಚಪ್ಪ ಬಿನ್ ನಂಜಪ್ಪ,
ಕುಂಬಾರಗೇರಿ ಶಿವಮೊಗ್ಗ
ಶ್ರೀ ಹುಸೇನ್ ಸಾಬ್,
ಕುಂಬಾರಗುಡಿ, ಶಿವಮೊಗ್ಗ
ಶ್ರೀ ಹೆಚ್.ಎಂ. ನಿಂಗಪ್ಪ. ಬಿನ್
ಮೈಲಾರಪ್ಪ, ಬೊಮ್ಮನಕಟ್ಟೆ,
ಶಿವಮೊಗ್ಗ.

ಶಿವಮೊಗ್ಗ ನಗರದ ಬಾಲ ಕಾರ್ಮಿಕರ ಕ್ಷೇಮಾಭಿವೃದ್ಧಿ

1754 (1375) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಗುರುತಿಸಲಾದ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು; ಅವರ ಪುನರ್‌ವಸತಿಗಾಗಿ ಕ್ರಮ ಕೈಗೊಳ್ಳಲಾಗಿದೆಯೆ; (ವಿವರ ನೀಡುವುದು)?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 65 ಬಾಲ ಕಾರ್ಮಿಕರನ್ನು ದಿ: 1.4.2002 ಮತ್ತು 31.1.2003 ರ ಅವಧಿಯಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಗುರುತಿಸಲಾಗಿದೆ.

ಈ ಎಲ್ಲಾ ಮಕ್ಕಳನ್ನು ಔಪಚಾರಿಕ ಮತ್ತು ವಿಶೇಷ ಶಾಲೆಗಳಿಗೆ ಸೇರಿಸಲಾಗಿದೆ. ವಿವರ ಈ ಕೆಳಗಿನಂತಿದೆ.

15 ಬಾಲ ಕಾರ್ಮಿಕರನ್ನು ಔಪಚಾರಿಕ ಶಾಲೆಗೆ ಸೇರಿಸಲಾಗಿದೆ. ಮತ್ತು 50 ಬಾಲ ಕಾರ್ಮಿಕರನ್ನು ವಿಶೇಷ ಶಾಲೆಗೆ ಸೇರಿಸಲಾಗಿದೆ.

ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ ರಸ್ತೆ ಅಭಿವೃದ್ಧಿ

1755 (1376) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ರಸ್ತೆ ಕಾಮಗಾರಿ ಕೈಗೊಳ್ಳಲಾಗಿದೆಯೆ; ಯೋಜನೆಯ ಮೊತ್ತವೆಷ್ಟು; ಪ್ರಾರಂಭವಾಗಿದ್ದಲ್ಲಿ ಕಾಮಗಾರಿ ಯಾವ ಹಂತದಲ್ಲಿ, ಯಾವಾಗ ಪೂರ್ಣಗೊಳ್ಳುವುದು, ವಿವರ ತಿಳಿಸುವಿರಾ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯ ಹೆದ್ದಾರಿಯ ಮೂರು ವರ್ಷದ ನಿರ್ವಹಣೆಯ ಯೋಜನೆ ಅಡಿಯಲ್ಲಿ ಶಿವಮೊಗ್ಗ ನಗರದಲ್ಲಿ 2.6 ಕಿ.ಮೀ ರಾಜ್ಯ ಹೆದ್ದಾರಿ ನಿರ್ವಹಣೆಯನ್ನು ತೆಗೆದುಕೊಂಡಿದೆ. ಅಲ್ಲದೆ ಜಿಲ್ಲೆಯಲ್ಲಿ 382.00 ಕಿ.ಮೀ ರಾಜ್ಯ ಹೆದ್ದಾರಿಯನ್ನು ಒಟ್ಟು ಗುತ್ತಿಗೆಯ ಮೊತ್ತವಾದ 1081.00 ಲಕ್ಷ ರೂ.ಗಳಲ್ಲಿ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ.

ಗುತ್ತಿಗೆದಾರರು ಮೊದಲ ವರ್ಷದ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಎರಡನೇ ವರ್ಷದ ನಿರ್ವಹಣೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸರ್ಕಾರಿ ಸ್ವಾಮ್ಯದ ಭೂಮಿಯ ಕಬಳಿಕೆ

1756 (1366) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು, ಗೇರಹಳ್ಳಿ ಕಸಬಾ ಹೋಬಳಿ ಸರ್ವೆ ನಂ. 15, ಸರ್ವೆ ನಂ. 12:1 ಮತ್ತು ಸರ್ವೆ ನಂ. 13 ರಲ್ಲಿರುವ ಸರ್ಕಾರಿ ಸ್ವಾಮ್ಯದ ಗುಂಡು ತೋಪಿನ ಎಕರೆವಾರು ಹಾಗೂ ಗುಂಟೆವಾರು ವಿವರ ನೀಡುವುದು.

ಆ) ಈ ಸರ್ವೆ ನಂಬರಿನ ಸರ್ಕಾರಿ ಗುಂಡು ತೋಪಿನ ಜಮೀನಿನಲ್ಲಿ ಫಾರಂ ಹೌಸ್ ವಿದ್ಯುಚ್ಛಕ್ತಿಯ ಮನೆ ಮೋಟಾರು ಪಂಪು ಇದ್ದು ಇದನ್ನು ಒಡೆದು ಹಾಕಿ ಭೂ ಕಬಳಿಕೆದಾರರು ಸರ್ಕಾರಿ ಭೂಮಿಯನ್ನು ನಿವೇಶನವನ್ನಾಗಿ ಮಾರ್ಪಡಿಸಿ ಮಾರಾಟ ಮಾಡಿರುವುದು ನಿಜವಲ್ಲವೆ;

ಇ) ಈ ಸರ್ವೆ ನಂಬರಿನ ಜಮೀನನ್ನು ತಾಸಗಿಯವರು ಭೂ ಒಡೆಯವರು ಭೂ ಕಬಳಿಕೆದಾರರು ಪೂರ್ತಿಸುತ್ತಿರುವುದು ನಿಜವಲ್ಲವೆ. ಹಾಗಿದ್ದರೆ ಸರ್ಕಾರಿ ಸ್ವಾಮ್ಯದ ಸರ್ಕಾರಿ ಗುಂಡುತೋಪಿನ ಜಮೀನನ್ನು ಕಬಳಿಸಲು ಹೊರಟಿರುವ ಅಧಿಕಾರಿಗಳ, ಭೂ ಕಬಳಿಕೆದಾರರ ವಿರುದ್ಧ ಕೈಗೊಳ್ಳುವ ಕ್ರಮವೇನು;

ಈ) ಈ ಸರ್ಕಾರಿ ಗುಂಡುತೋಪಿನ ಸರ್ವೆ ನಂಬರಿನ ಜಮೀನನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡು ಕೋಟ್ಯಾನುಗಟ್ಟಲೆ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಸರ್ಕಾರಿ ಆಸ್ತಿಯನ್ನು ಉಳಿಸಿಕೊಳ್ಳುವುದು ಯಾವಾಗ. ಹಾಗೂ ಭೂ ಕಬಳಿಕೆದಾರರ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಬೆಂಗಳೂರು ಉತ್ತರ ತಾಲ್ಲೂಕು, ಗೇರಹಳ್ಳಿ ಗ್ರಾಮದ ಸರ್ವೆ ನಂ. 15, 21:1 ಮತ್ತು 13ರ ಜಮೀನು ಹಿಡುವಳಿ ಜಮೀನಾಗಿದ್ದು, ಎಕರೆವಾರು ವಿವರ ಕೆಳಕಂಡಂತೆ ಇರುತ್ತದೆ.

ಸರ್ವೆ ನಂ.	ಎಕರೆ ಗುಂಟೆ
15	10:13
12:1	3-25
13	2-13

ಆ) ಈ ಜಮೀನು ಸರ್ಕಾರಿ ಜಮೀನಲ್ಲ